ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 28-11-2015

# ಪತ್ರಿಕಾ ಪ್ರಕಟಣೆ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾಗೋಷ್ಠಿ:<br>ಕೆ. ನಾಗರಾಜು,<br>ಕೇಂದ್ರ ಚುನಾವಣಾಧಿಕಾರಿಗಳು,<br>ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು | 30–11–2015<br>ಸೋಮವಾರ<br>ಬೆಳಿಗ್ಗೆ<br>11–30 ಗಂಟೆಗೆ | ಪಂಪ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ,<br>ಚಾಮರಾಜಪೇಟೆ,<br>ಬೆಂಗಳೂರು – 560 018 |
| 2. | "ಬೆಳ್ಳಿ ಹೆಜ್ಜೆ" ಯಲ್ಲಿ ನಮ್ಮೊಂದಿಗೆ ಹ್ಯಾಟ್ರಿಕ್ ಹೀರೋ – ಸೆಂಚುರಿ ಸ್ಟಾರ್ ಡಾ. ಶಿವರಾಜ್ ಕುಮಾರ್.<br>ಮುಖ್ಯ ಅತಿಥಿಗಳು:<br>ಆರ್. ರೋಷನ್ ಬೇಗ್,<br>ಮೂಲಸೌಲಭ್ಯ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು.<br>ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್,<br>ಹಿರಿಯ ಚಲನಚಿತ್ರ ನಿರ್ಮಾಪಕರು<br>ಸಾ.ರಾ. ಗೋವಿಂದು,<br>ಅಧ್ಯಕ್ಷರು,<br>ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, | 30–11–2015<br>ಸೋಮವಾರ<br>ಸಂಜೆ<br>5–00 ಗಂಟೆಗೆ | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು. |

| | | | |
|---|---|---|---|
| | **ದ್ವಾರ್ಕೈ ಭಗವಾನ್,**<br>ಹಿರಿಯ ಚಲನಚಿತ್ರ ನಿರ್ದೇಶಕರು.<br>**ಶ್ರೀಮತಿ ಸುಧಾರಾಣಿ,**<br>ಚಲನಚಿತ್ರ ಕಲಾವಿದರು.<br>**ಎನ್.ಆರ್ ವಿಶುಕುಮಾರ್,**<br>ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | | |

**<u>ದಾಸ ಸಾಹಿತ್ಯಕ್ಕೆ ವೈಚಾರಿಕ ಚೌಕಟ್ಟು ಒದಗಿಸಿದ ಕನಕದಾಸರು</u>**

**<u>– ಮುಖ್ಯಮಂತ್ರಿ ಸಿದ್ದರಾಮಯ್ಯ</u>**

ಬೆಂಗಳೂರು, ನ. 28 (ಕರ್ನಾಟಕ ವಾರ್ತೆ)–

ಕನಕದಾಸರು ದಾಸ ಸಾಹಿತ್ಯಕ್ಕೆ ವೈಚಾರಿಕ ಮತ್ತು ಜಾತ್ಯಾತೀತ ಚೌಕಟ್ಟು ತಂದುಕೊಟ್ಟರು. ಈ ಕಾರಣಕ್ಕಾಗಿ ಅವರು ಎಂದೆಂದಿಗೂ ಪ್ರಸ್ತುತರಾಗುತ್ತಾರೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಅಭಿಪ್ರಾಯಪಟ್ಟರು.

ಅವರು ಇಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಸಲಾದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಕನಕದಾಸರು ವಿಶ್ವಮಾನವ. ಜಾತಿ, ಧರ್ಮ, ಪಂಥ ಎಲ್ಲವನ್ನೂ ಮೀರಿ ಬೆಳೆದವರು; ಸೀಮಾತೀತರು ಎಂದು ಬಣ್ಣಿಸಿದ ಮುಖ್ಯಮಂತ್ರಿಯವರು ದೇಶದಲ್ಲಿ ಅಸಹಿಷ್ಣುತೆ ಹೆಚ್ಚುತ್ತಿರುವುದು ಸಮಾಜ ಮತ್ತು ಮನುಕುಲಕ್ಕೆ ಅಪಾಯಕಾರಿ ಎಂದು ಆತಂಕ ವ್ಯಕ್ತಪಡಿಸಿದರು.

ಜಾತಿಜಾತಿಗಳು, ಧರ್ಮಧರ್ಮಗಳ ನಡುವೆ ವಿಷಬೀಜ ಬಿತ್ತುವ ಕೆಲಸ ಹಿಂದೆಯೂ ನಡೆದಿತ್ತು. ಇಂದಿಗೂ ನಡೆಯುತ್ತಿದೆ. ಕನಕದಾಸರು " ಕುಲ ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ಬಲ್ಲಿರಾ?" ಎಂದು ಸಂಕುಚಿತ ಭಾವನೆಯನ್ನು ಪ್ರಶ್ನಿಸಿದರು. ಕನಕದಾಸರ ಕೀರ್ತನೆ, ಸಾಹಿತ್ಯವನ್ನು ಜನರಿಗೆ ಹೆಚ್ಚು ಹೆಚ್ಚು ತಿಳಿಸಬೇಕಾಗಿದೆ. ಯುವಜನಾಂಗದಲ್ಲಿ ಈ ವಿಚಾರದ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ. ಇಲ್ಲದಿದ್ದರೆ ಸಮಾಜದಲ್ಲಿ ಬದಲಾವಣೆ ತರುವುದು ಕಷ್ಟ ಎಂದು ನುಡಿದರು.

ಬಸವಣ್ಣನವರ ತತ್ವದ ಬಗ್ಗೆ ಮಾತನಾಡುವವರು ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಪ್ರವೃತ್ತಿ ಇದೆ. ಇದು ಕನಕದಾಸರ ಸಿದ್ಧಾಂತಗಳಿಗೂ ಅನ್ವಯಿಸುತ್ತದೆ. ಬಸವಣ್ಣ, ಕನಕದಾಸರ ಜಯಂತಿಗಳನ್ನು ಆಚರಿಸುವುದು ಅವರನ್ನು ವೈಭವೀಕರಿಸುವ ಉದ್ದೇಶದಿಂದ ಅಲ್ಲ. ಅವರ ವಿಚಾರಗಳನ್ನು ಪಸರಿಸುವುದು, ಆ ತತ್ವಗಳನ್ನು ಪಾಲಿಸುವುದೇ ನಾವು ಅವರಿಗೆ ತೋರುವ ಗೌರವ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಉಮಾಶ್ರೀಯವರು, ಕನಕದಾಸರ ಸಾಹಿತ್ಯ ವಿಚಾರಧಾರೆಗಳನ್ನು ಬೇರೆ ಭಾಷೆಗಳಿಗೆ ತರ್ಜುಮೆ ಮಾಡಿ ಪ್ರಚಾರ ಪಡಿಸಲು ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು. ತುಳಿತಕ್ಕೊಳಗಾದ ಸಮುದಾಯದವರೂ ಕನಕದಾಸರು ಸಂತ ಶ್ರೇಷ್ಠರ ಸಾಲಿನಲ್ಲಿ ಗುರುತಿಸಿಕೊಂಡವರು ಎಂದು ಅವರು ಕನಕದಾಸರ ವ್ಯಕ್ತಿತ್ವ, ಪ್ರತಿಭೆಯನ್ನು ವರ್ಣಿಸಿದರು.

ಸಮಾರಂಭದಲ್ಲಿ ದಾಸ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರುವ ಕಲಬುರ್ಗಿಯ ಡಾ: ಸ್ವಾಮಿರಾವ್ ಕುಲಕರ್ಣಿಯವರಿಗೆ 2015ನೇ ಸಾಲಿನ ಕನಕಶ್ರೀ ಪ್ರಶಸ್ತಿ ಹಾಗೂ ವಿಜಯಪುರದ ಶ್ರೀ ಚಂದ್ರಕಾಂತ ಬಿಜ್ಜರಗಿ ಅವರಿಗೆ 2015ರ ಕನಕ ಗೌರವ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪಕ, ಮೂಲಸೌಕರ್ಯ ಅಭಿವೃದ್ದಿ ಹಾಗು ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಅಭಿವೃದ್ದಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಕೆ.ಜೆ. ಜಾರ್ಜ್, ಸಮಾಜ ಕಲ್ಯಾಣ ಸಚಿವ ಶ್ರೀ ಆಂಜನೇಯ, ವಿಧಾನ ಪರಿಷತ್ ಸದಸ್ಯರಾದ ಶ್ರೀಮತಿ ಮೋಟಮ್ಮ, ಶ್ರೀ ಎಚ್.ಎಂ. ರೇವಣ್ಣ, ಬೈರತಿ ಸುರೇಶ್, ಆರ್.ವಿ. ವೆಂಕಟೇಶ್, ಮೊದಲಾದವರು ಉಪಸ್ಥಿತರಿದ್ದರು.

***************

## ಪ್ರಬುದ್ಧ ಸಿನೆಮಾ ಸಂಸ್ಕೃತಿ ಹುಟ್ಟು ಹಾಕಿದ ಅಕಾಡೆಮಿ

**– ಗಿರೀಶ್ ಕಾಸರವಳ್ಳಿ**

ಬೆಂಗಳೂರು, ನ. 28 (ಕರ್ನಾಟಕ ವಾರ್ತೆ)–

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಒಂದು ಪ್ರಬುದ್ಧ ಸಿನಿಮಾ ಸಂಸ್ಕೃತಿಯನ್ನು ಹುಟ್ಟುಹಾಕುವಲ್ಲಿ ಯಶಸ್ವಿಯಾಗಿದೆ ಎಂದು ಖ್ಯಾತ ಚಿತ್ರ ನಿರ್ದೇಶಕ ಶ್ರೀ ಗಿರೀಶ್ ಕಾಸರವಳ್ಳಿಯವರು ಅಭಿಪ್ರಾಯಪಟ್ಟರು.

ಅವರು ಇಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಪ್ರಕಟಿಸಿರುವ ಕನ್ನಡ ಚಿತ್ರೋದ್ಯಮದ ಸಮಕಾಲೀನ ಸೆಳಕುಗಳನ್ನು ದಾಖಲಿಸುವ 'ಚಂದನವನ' ಪುಸ್ತಕ ಹಾಗೂ 'ವರ್ಷದ ಹಾದಿ' ಕಿರುಹೊತ್ತಿಗಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ಅಕಾಡೆಮಿಯು ಎಲ್ಲ ಜಿಲ್ಲೆಗಳಲ್ಲಿ ಇಂತಹ ಸಿನಿಮಾ ಸಂಸ್ಕೃತಿಯನ್ನು ಬೆಳೆಸಲಿ. ಅಕಾಡೆಮಿ ಅಧ್ಯಕ್ಷರಾಗಿ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀ ಟಿ.ಎಸ್. ನಾಗಾಭರಣ ಅವರು ಮಾತನಾಡಿ ಒಂದು ಮೇಲ್‌ಸ್ತರದ ದೃಶ್ಯ ಸಂಸ್ಕೃತಿಯನ್ನು

ಹುಟ್ಟುಹಾಕಬೇಕು. ಸಿನಿಮಾವನ್ನು ಶಿಕ್ಷಣದ ಒಂದು ಸಾಧನವನ್ನಾಗಿ ಕಾಣುವ ವಾತಾವರಣವನ್ನು ಸೃಷ್ಟಿ ಮಾಡಬೇಕೆನ್ನುವುದು ಅಕಾಡೆಮಿಯ ಆಶಯ. ಕಳೆದ ಆರು ವರ್ಷಗಳಲ್ಲಿ ಈ ಆಶಯ ಈಡೇರಿದೆ. ಮುಂದೆಯೂ ಈ ಪರಂಪರೆ ಮುಂದುವರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮ ನಿನ್ನೆಯ ಆಧಾರದಲ್ಲಿ ನಾಳೆಗಳನ್ನು ಕಟ್ಟುವ ಕೆಲಸ ಆಗಬೇಕು. ಈ ಆಶಯವನ್ನು ಸಾಕಾರಗೊಳಿಸಲು ಈ ಪುಸ್ತಕ ಯತ್ನಿಸಿದೆ ಎಂದು ಅವರು ಹೇಳಿದರು.

ಪತ್ರಕರ್ತ ಹಾಗೂ ಚಂದನವನ ಸಂಪಾದಕ ಮಂಡಳಿಯ ಸದಸ್ಯ ಶ್ರೀ ಚ.ಹ.ರಘುನಾಥ್ ಅವರು ಮಾತನಾಡಿ ಚಿತ್ರರಂಗದ ಸಮಕಾಲೀನ ಇತಿಹಾಸ ದಾಖಲಿಸುವಲ್ಲಿ ತಮ್ಮ ತಂಡದ ಪರಿಶ್ರಮ ಅದಮ್ಯವಾದದ್ದು. ಸಿನಿಮಾ ಇಂದಿಗೂ ಕೂಡ ಜನರನ್ನು ತಲುಪುವ ಪ್ರಭಾವಶಾಲಿ ಮಾಧ್ಯಮವಾಗಿ ಉಳಿದುಕೊಂಡಿದೆ ಎಂದು ಅಭಿಪ್ರಾಯಪಟ್ಟರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್ ಮಾತನಾಡಿದರು.

ಅಕಾಡೆಮಿಯ ಅಧ್ಯಕ್ಷ ಶ್ರೀ ಎಸ್.ವಿ. ರಾಜೇಂದ್ರಸಿಂಗ್ ಬಾಬು ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಎಚ್.ಬಿ. ದಿನೇಶ್ ಸ್ವಾಗತಿಸಿದರು. ಅಕಾಡೆಮಿಯ ಮಾಜಿ ಅಧ್ಯಕ್ಷೆ ಶ್ರೀಮತಿ ತಾರಾ ಅನುರಾಧ, ಚಿತ್ರನಿರ್ಮಾಪಕ ಶ್ರೀ ರಾಕ್‌ಲೈನ್ ವೆಂಕಟೇಶ್, ಖ್ಯಾತ ನಿರ್ದೇಶಕ ಶ್ರೀ ಪಿ. ಶೇಷಾದ್ರಿ, ಚಂದನವನ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀ ಎನ್. ವಿಶಾಖ, ಶ್ರೀ ಚೇತನ್ ನಾಡಿಗೇರ್, ಶ್ರೀ ಶ್ಯಾಮಸುಂದರ ಕುಲಕರ್ಣಿ ಮೊದಲಾದವರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ 'ಚಂದನವನ' ಸಂಪಾದಕ ಮಂಡಳಿಯನ್ನು ಸನ್ಮಾನಿಸಲಾಯಿತು.

## 'ಬೆಳ್ಳಿ ಹೆಜ್ಜೆ'ಯಲ್ಲಿ ನಟ ಶಿವರಾಜ್‌ಕುಮಾರ್

ಬೆಂಗಳೂರು, ನ. 28 (ಕರ್ನಾಟಕ ವಾರ್ತೆ)–

ಕರ್ನಾಟಕ ಚಲನಚಿತ್ರ ಅಕಾಡೆಮಿಯ 58 ನೇ 'ಬೆಳ್ಳಿ ಹೆಜ್ಜೆ' ಕಾರ್ಯಕ್ರಮಕ್ಕೆ ಖ್ಯಾತ ನಟ, ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್ ಕುಮಾರ್ ಮೆರುಗು. ಮೂರು ದಶಕಗಳ ವೃತ್ತಿ ಜೀವನದಲ್ಲಿ ತಮ್ಮದೇ ಛಾಪು ಮೂಡಿಸಿ, ಉತ್ತುಂಗಕ್ಕೇರಿದ ಶಿವಣ್ಣ 'ಬೆಳ್ಳಿ ಹೆಜ್ಜೆ'ಯಲ್ಲಿ ತಮ್ಮ ಬೆಳ್ಳಿ ಬದುಕಿನ ಅನುಭವಗಳನ್ನು ಬಿಚ್ಚಿಡಲಿದ್ದಾರೆ.

ನವೆಂಬರ್ 30 ರಂದು ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಡಾ. ಶಿವರಾಜ್ ಕುಮಾರ್ ಕುರಿತ ಛಾಯಾಚಿತ್ರ ಪ್ರದರ್ಶನ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ.

ಚಿತ್ರರಂಗ ನಡೆದು ಬಂದ ದಾರಿಯನ್ನು ಹೆಸರಾಂತ ಕಲಾವಿದರ ನೆನಪುಗಳ ಮೂಲಕ ಅವಲೋಕನ ಮಾಡುವ 'ಬೆಳ್ಳಿ ಹೆಜ್ಜೆ' ಕಾರ್ಯಕ್ರಮ ಚಿತ್ರರಂಗದ ಇತಿಹಾಸಕ್ಕೊಂದು ಹೊಸ ಭಾಷ್ಯ ಬರೆದಿದೆ. ನವೆಂಬರ್ 30 ರ ಈ 'ಬೆಳ್ಳಿ ಹೆಜ್ಜೆ' ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್, ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಶ್ರೀ ಸಾ.ರಾ. ಗೋವಿಂದು, ಹಿರಿಯ ಚಲನಚಿತ್ರ ನಿರ್ದೇಶಕ ಶ್ರೀ ದೊರೆ ಭಗವಾನ್, ಚಲನಚಿತ್ರ ಕಲಾವಿದೆ ಶ್ರೀಮತಿ ಸುಧಾರಾಣಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್ ಮೊದಲಾದವರು ಪಾಲ್ಗೊಳ್ಳಲಿದ್ದಾರೆ.